ಬೆಂಗಳೂರು ನಗರ ವಿಶ್ವವಿದ್ಯಾನಿಲಯ

BENGALURU CITY UNIVERSITY

ಆಗು ನೀ ಅನಿಕೇತನ
BE BOUNDLESS

Central College Campus, Dr. AmbedkarVeedhi,Bengaluru – 560 001.
Ph.No.9844169326 /080- 22131385 email-nssbcu@gmail.com

ಬಿಸಿಯು/ಎನ್.ಎಸ್.ಎಸ್/ದೈ.ವಿ.ಶಿ.ಅ/309/2021–22 ದಿನಾಂಕ: 11–11–2021

**ಸುತ್ತೋಲೆ**

ವಿಷಯ: 2021–22ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮದ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: 1. ಯುಸೇಇ/ರಾಸೇಯೋ/40/2021–22/10 ದಿನಾಂಕ: 26–10–2021
2. ಯುಸೇಇ/ರಾಸೇಯೋ/12/2021/2021–22/286 ದಿನಾಂಕ: 27–10–2021
3. ಯುಸೇಇ/ರಾಸೇಯೋ/19/2021–22/294 ದಿನಾಂಕ: 30–10–2021
4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 08–11–2021

2021–22 ನೇ ಸಾಲಿಗೆ ರಾಷ್ಟ್ರೀಯ ಸೇವಾ ಯೋಜನೆಯ (ಎನ್.ಎಸ್.ಎಸ್) ದೈನಂದಿನ ಹಾಗೂ ವಿಶೇಷ ಶಿಬಿರಗಳ ಕಾರ್ಯಕ್ರಮಗಳಿಗೆ ಕೇಂದ್ರ ಸರ್ಕಾರದ ಅನುದಾನವು ಮೊದಲನೇ ಕಂತಿನಲ್ಲಿ ಶೇ.75% ರಷ್ಟು ವಿಶ್ವವಿದ್ಯಾನಿಲಯಕ್ಕೆ ಬಿಡುಗಡೆಯಾಗಿರುತ್ತದೆ. 2021–22ನೇ ಸಾಲಿನ ದೈನಂದಿನ ಹಾಗೂ ವಿಶೇಷ ಶಿಬಿರಗಳಿಗೆ ಎನ್.ಎಸ್.ಎಸ್ ಘಟಕ ಹೊಂದಿರುವ ಕಾಲೇಜುಗಳಿಗೆ ಬಿಡುಗಡೆ ಮಾಡಬೇಕಾಗಿದ್ದು ಅದರಂತೆ ಈ ಸಾಲಿನ ಎನ್.ಎಸ್.ಎಸ್ ಚಟುವಟಿಕೆಗಳ ಮಧ್ಯವಾರ್ಷಿಕ ವರಧಿ, ಗ್ರಾಂಟ್–ಇನ್–ಏಡ್ ಬಿಲ್‌ಗಳು, ಎನ್.ಎಸ್.ಎಸ್ ಸ್ವಯಂ ಸೇವಕ/ಸೇವಕಿಯರ ನೋಂದಣಿ ಪಟ್ಟಿ, ಕಾಲೇಜಿನ ಸ್ವ–ವಿವರಗಳನ್ನು, ಕಾಲೇಜಿನ ಎನ್.ಎಸ್.ಎಸ್ ಬ್ಯಾಂಕ್ ಖಾತೆಯ ಪಾಸ್‌ಪುಸ್ತಕದ ಪ್ರತಿಯನ್ನು ಈ ಮೇಲೆ ತಿಳಿಸಿದ ಎಲ್ಲಾ ದಾಖಲೆಗಳನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಎನ್.ಎಸ್.ಎಸ್ ಕೋಶಕ್ಕೆ ದಿನಾಂಕ: 20–11–2021 ರ ಒಳಗಾಗಿ ವಿಶ್ವವಿದ್ಯಾನಿಲಯದ ಎನ್.ಎಸ್.ಎಸ್ ಕೋಶದ ವೆಬ್‌ಸೈಟ್‌ನಲ್ಲಿ ಇರುವ ಮಾದರಿಯಂತೆ (Format) ಸಲ್ಲಿಸಲು ಕೋರಲಾಗಿದೆ.

2021–22ನೇ ಸಾಲಿನ ಎನ್.ಎಸ್.ಎಸ್ ಸ್ವಯಂ ಸೇವಕ/ಸೇವಕಿಯರ ನೋಂದಣಿ ವಿವರಗಳನ್ನು ಎನ್.ಎಸ್.ಎಸ್ ಡೇಟಾಬೇಸ್‌ನ (Nsskarnataka.net) ರಲ್ಲಿ ನಮೂದಿಸಲು ಕೋರಿ ಕಾಲೇಜುಗಳಿಗೆ USER NAME ಮತ್ತು PASSWORDಗಳನ್ನು ಈಗಾಗಲೇ ಈಮೇಲ್ ಮುಖಾಂತರ ಕಳುಹಿಸಿ ಕೊಡಲಾಗಿತ್ತು. ಕೆಲವು ಕಾಲೇಜುಗಳು ಇನ್ನು ಸ್ವಯಂ ಸೇವಕರ ನೋಂದಣಿಯನ್ನು ಮಾಡಿರುವುದಿಲ್ಲ. ಎನ್.ಎಸ್.ಎಸ್ ಅನುದಾನವು ಎನ್.ಎಸ್.ಎಸ್ ಗೆ ನೊಂದಾಯಿಸಿದ ಸ್ವಯಂ ಸೇವಕ/ಸೇವಕಿಯರ ವಿವರಗಳ ಆಧಾರದ ಮೇಲೆ ಬಿಡುಗಡೆ ಮಾಡಬೇಕಾಗಿರುವುದರಿಂದ ತಾವುಗಳು ಮುತುವರ್ಜಿ ವಹಿಸಿ ಕೂಡಲೇ ಸ್ವಯಂ ಸೇವಕರ ವಿವರಗಳನ್ನು (NssKarnataka.net) ಲಿಂಕ್‌ನಲ್ಲಿ ನಮೂದಿಸಲು ಕೋರಲಾಗಿದೆ.

ಮುಂದುವರೆದು 2018–19 ಮತ್ತು 2019–20 ನೇ ಸಾಲಿನ ಎನ್.ಎಸ್.ಎಸ್ ಅನುದಾನವನ್ನು ತಮ್ಮ ಕಾಲೇಜಿನ PFMS ಬ್ಯಾಂಕ್ ಖಾತೆಯಲ್ಲಿ EAT Module ರಲ್ಲಿ ಉಪಯೋಗಿತ ಅನುದಾನದ ವಿವರಗಳನ್ನು ಕೂಡಲೇ ಭರ್ತಿಮಾಡಲು ಸೂಚಿಸಲಾಗಿದೆ ಇಲ್ಲದಿದ್ದಲ್ಲಿ ಈ ಅನುದಾನವನ್ನು ಸರ್ಕಾರವು ಉಪಯೋಗಿಸಿಲ್ಲವೆಂದು ಪರಿಗಣಿಸಿ ಮರುಪಾವತಿ ಪಡೆಯಬಹುದಾಗಿದೆ ಹಾಗೂ ಅನುದಾನ ಪಡೆದ ಕಾಲೇಜಿನ ಜವಾಬ್ದಾರಿಯಾಗಿರುತ್ತದೆ.

**ಈ ಮೇಲೆ ತಿಳಿಸಿದ ವಿವರಗಳನ್ನು <u>ತುರ್ತು ಎಂದು ಪರಿಗಣಿಸಿ</u> ಕೂಡಲೇ ಸಲ್ಲಿಸುವುದು.**

ಗೆ,

ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳು

ಕುಲಸಚಿವರು

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಸೆಂಟ್ರಲ್ ಕಾಲೇಜು ಆವರಣ
ಬೆಂಗಳೂರು - 560 001

ಪ್ರತಿಗಳು:

1. ಕುಲಪತಿಗಳು / ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಬೆ.ನ.ವಿ.
2. ಎನ್.ಎಸ್.ಎಸ್ ಸಂಯೋಜನಾಧಿಕಾರಿಗಳು, ಬೆ.ನ.ವಿ
3. ಸಂಯೋಜಿತ ಕಾಲೇಜುಗಳ ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿಗಳು.
4. ಕಚೇರಿ ಪ್ರತಿ.